# ಇಬ್ಬಗೆಯ ಬದುಕು

ಭಾರತೀಯ ಸಮಾಜ ತನ್ನ ಚರಿತ್ರೆಯುದ್ದಕ್ಕೂ ಇಬ್ಬಗೆಯ ಬದುಕನ್ನು ಜೀವಿಸುತ್ತಾ ಬಂದಿದೆ. ಈ ಬಗೆಯ ಅಂತರದ ಬದುಕನ್ನು ಭಾರತೀಯ ಧರ್ಮಶಾಸ್ತ್ರಗಳು ಕರ್ಮಸಿದ್ಧಾಂತದ ನೆಲೆಯಲ್ಲಿ ಅನಿವಾರ್ಯವೆಂದು ಪ್ರತಿಪಾದಿಸುತ್ತಾ ಬಂದಿವೆ. ತಾನು ಹಿಂದಿನ ಜನ್ಮಾಂತರಗಳಲ್ಲಿ ಸಂಚಯಿಸಿದ ಪುಣ್ಯದ ಬಲದಿಂದಾಗಿ ಈ ಜನ್ಮದಲ್ಲಿ ಸುಖವನ್ನು ಅನುಭವಿಸುತ್ತಾನೆಂದೂ, ಇಲ್ಲದಿದ್ದಲ್ಲಿ ಕಷ್ಟ ಪರಂಪರೆಗಳಲ್ಲಿ ತೊಳಲಾಡುತ್ತಾನೆಂದೂ ಹೇಳುತ್ತಾ ಬಂದಿವೆ. ಇಲ್ಲಿ ಮಾನವ ಪ್ರೀತಿಯು ಮಾಯವಾಗಿರುವುದನ್ನು ಕಾಣಬಹುದು. ಒಂದು ತುತ್ತು ಅನ್ನಕ್ಕಾಗಿ, ಬಿಸಿಲು–ಚಳಿಗಾಳಿಗಳಿಂದ ರಕ್ಷಿಸಿಕೊಳ್ಳಲು ಬೇಕಾಗಿರುವ ಒಂದು ತುಂಡು ಬಟ್ಟೆಗಾಗಿ ಮತ್ತು ಸುರಕ್ಷಿತವಾಗಿ ಮಲಗಲು ಒಂದು ಸಾಧಾರಣ ಆಸರೆಗಾಗಿ ತನ್ನ ಜೀವಮಾನವಿಡೀ ದುಡಿಯುವ ವ್ಯಕ್ತಿಯ ದುಡಿಮೆಯನ್ನು ಅವಮಾನ ಮಾಡುವ ಮತ್ತು ಆ ದುಡಿಮೆಯಿಂದ ತಾನು ಸುಖ ಅನುಭವಿಸುವ ತಂತ್ರಗಾರಿಕೆ ಈ ನಿಲುವುಗಳಲ್ಲಿ ಕೆಲಸ ಮಾಡುತ್ತಾ ಬಂದಿದೆ. ಹಾಗೆ ನೋಡಿದರೆ ಸದಾ ದುಡಿಯುವ ವ್ಯಕ್ತಿಗೆ ಅವನ ದುಡಿಮೆಗೆ ತಕ್ಕ ಪ್ರತಿಫಲದ ಸೌಖ್ಯಗಳು ದೊರೆಯಬೇಕು, ಆ ಸೌಖ್ಯಗಳನ್ನು ಕೊಡುವುದು ದುಡಿಸಿಕೊಳ್ಳುವ ವರ್ಗದ ಕರ್ತವ್ಯವಾಗಬೇಕು. ಆದರೆ ದುಡಿಸಿಕೊಳ್ಳುವ ವರ್ಗ ಚರಿತ್ರೆಯುದ್ದಕ್ಕೂ ದುಡಿಮೆಗೆ ಮೋಸಮಾಡುತ್ತಾ ಬಂದಿರುವುದು ಮಾತ್ರ ವಾಸ್ತವ ಸತ್ಯವೂ, ವಿಷಾದಕರ ಸಂಗತಿಯೂ ಆಗಿದೆ.

ಈ ಅಸಮಾನತೆಯ ಇಬ್ಬಗೆಯ ಬದುಕಿನ ವಿರುದ್ಧವಾಗಿ, ಸಮಾನತೆಯ ಸ್ಥಾಪನೆಗಾಗಿ, ಜೀವ ಪ್ರೀತಿಯ ಅರಳುವಿಕೆಗಾಗಿ ಕೆಲವಾರು ಮಹನೀಯರು ಹೋರಾಡಿರುವುದು ಸುಳ್ಳಲ್ಲ. ಬಹುಪಾಲು ದುಡಿಮೆಯ ವರ್ಗವನ್ನು ಶೋಷಕ ಶಕ್ತಿಗಳಿಂದ ಮುಕ್ತಗೊಳಿಸಲು ಮತ್ತು ಸಮಾಜವನ್ನು ಉದಾರೀಕರಣಗೊಳಿಸಲು ಅವರು ಹೆಣಗಿದ್ದರೂ ಚರಿತ್ರೆಯ ಗತಿಯಲ್ಲಿ ಮತ್ತು ಅದರ ಧೋರಣೆಯಲ್ಲಿ ಬದಲಾವಣೆಯಾದಂತೆ ಕಂಡುಬಂದಿಲ್ಲ. ಬುದ್ಧ, ಏಸು, ಬಸವನಂಥ ಮಹನೀಯರ ಸಂದೇಶಗಳು ಮತ್ತು ಜೀವನ ಮಾರ್ಗಗಳು ಮಾದರಿಯಾಗಿ ಸಮಾಜವನ್ನು ಪರಿವರ್ತನೆ ಮಾಡಿದ್ದ ಪಕ್ಷದಲ್ಲಿ ಈಗಿರುವ ಇಬ್ಬಗೆಯ ಬದುಕು ಇರಲು ಸಾಧ್ಯವಾಗುತ್ತಿರಲಿಲ್ಲ– ಅಂದರೆ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸಮಾನತೆಗಾಗಿ ಹೋರಾಟಗಳು ನಿರಂತರವಾಗಿ ನಡೆಯಬೇಕಾಗಿರಲಿಲ್ಲ.

ಭಾರತೀಯ ಸಮಾಜವು ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದರೂ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳಿಂದ ಬಡವ ಶ್ರೀಮಂತ ಎಂಬ ಎರಡು ಸಮಾನಾಂತರ ರೇಖೆಗಳಲ್ಲಿ ಚಲಿಸುತ್ತಿದೆ. ಈ ಎರಡು ವರ್ಗದ ಅಂತರಗಳನ್ನು ಮತ್ತಷ್ಟು ಛಿದ್ರಗೊಳಿಸುವ ಹುನ್ನಾರಗಳನ್ನು ಮತಧರ್ಮಗಳು ಉಂಟುಮಾಡಿವೆ. ಇದರಿಂದಾಗಿ ಬಡವ ಶ್ರೀಮಂತ ಎಂಬ ಇಬ್ಬಗೆಯ ಬದುಕು ನಾನಾ ನೆಲೆಗಳಲ್ಲಿ, ಸ್ವರೂಪಗಳಲ್ಲಿ ಸಮಾನತೆಯ ರೇಖೆಯ ಬಳಿ ಬಾರದಷ್ಟು ಅಂತರಗಳನ್ನು ತಮ್ಮ ತಮ್ಮಲ್ಲೇ ಸೃಷ್ಟಿಮಾಡಿಕೊಂಡು ಬಿಟ್ಟಿದೆ. ಅನೇಕತೆಯಲ್ಲಿ ಏಕತೆಯನ್ನು ಕಾಣುವ ಕನಸು, ಕನಸಾಗಿ ಮಾತ್ರ ಭಾರತದಲ್ಲಿ ಜೀವಂತವಾಗಿ ಹರಿದು ಬರುತ್ತಿದೆಯಲ್ಲಾ ಎಂಬ ನೋವು ವಿಚಾರವಂತರನ್ನು, ಸೂಕ್ಷ್ಮಮತಿಗಳನ್ನು ಸದಾ ಕಾಡುತ್ತಿದೆ.

ನಾಳಿನ ಪ್ರಜೆಗಳಾದ ಇಂದಿನ ಮಕ್ಕಳು ಇಂದು ನಗರಗಳಲ್ಲಿ ಶಾಲೆಗಳಿಗೆ ಹೋಗುವ, ಕಲಿಯುವ ಭಿನ್ನತೆಯನ್ನು ನೋಡುವುದರಲ್ಲೇ ಭಾರತೀಯ ಇಬ್ಬಗೆಯ ಬದುಕಿನ ತೀವ್ರತೆ ಅರಿವಿಗೆ ಬರುತ್ತದೆ. ಇಂದಿಗೂ ಹರಿದ ಬಟ್ಟೆಗಳನ್ನು ತೊಟ್ಟು, ಮಾಸಿದ ತಲೆಯಲ್ಲಿ ಚಪ್ಪಲಿಗಳಿಲ್ಲದ ಪಾದಗಳಲ್ಲೇ ನಡೆದುಕೊಂಡು ಶಾಲೆಗೆ ಹೋಗುವ ಸಾವಿರಾರು ಮಕ್ಕಳು ಒಂದುಕಡೆ ಕಂಡುಬಂದರೆ, ಮತ್ತೊಂದು ಕಡೆ ಎಸಿ ಕಾರುಗಳಲ್ಲಿ, ಸುಸಜ್ಜಿತ ಶಾಲಾ ಬಸ್ಸುಗಳಲ್ಲಿ ಬೆಲೆಬಾಳುವ ಸಮವಸ್ತ್ರ ಧರಿಸಿ, ಬೂಟು–ಟೈಗಳನ್ನು ತೊಟ್ಟು ಶಾಲೆಗಳಿಗೆ ಹೋಗುವ ಶ್ರೀಮಂತರ ಮಕ್ಕಳಿದ್ದಾರೆ. ಈ ಇಬ್ಬರನ್ನು ಬೆಸೆಯುವ ಸಮಾನತೆಯ ತತ್ವ ಮತ್ತು ತಂತು ಮಾತ್ರ ಗೋಚರಿಸುತ್ತಿಲ್ಲ. ಇವರಿಬ್ಬರು ತಾವು ಒಂದೆಂದು ಭಾವಿಸಿ ದೇಶ ಕಟ್ಟುವ ಕಾಯಕದಲ್ಲಿ ತೊಡಗುತ್ತಾರೆಂಬ ನಂಬಿಕೆ ಬರುವುದಾದರೂ ಎಂತು...?

ಕವಿ ಕುವೆಂಪುರವರ ಕಲ್ಕಿ ಕವನದ ಆಶಯ ಕೇವಲ ಆದರ್ಶವಾಗಿ ಮಾತ್ರ ಉಳಿದು ಬಿಡಬಹುದು ಎಂಬ ಹೆದರಿಕೆ ಕಾಡುತ್ತದೆ.

■ ಶಿಕಾಕು

## ಮಾತೇ ಮುತ್ತು

★ ಕಾವ್ಯ ಶಾಸ್ತ್ರದ ಓದು, ಚಿತ್ರಕಲೆ, ನಾಟಕದ ವೀಕ್ಷಣೆ ಹಾಗೂ ಸಂಗೀತದ ಆಲಿಸುವಿಕೆಯಲ್ಲಿ ಬುದ್ಧಿವಂತರ ವೇಳೆ ಕಳೆಯುತ್ತದೆ. ಆದರೆ ಮೂರ್ಖರ ಹೊತ್ತು ಜೂಜು, ನಿದ್ರೆ, ಜಗಳದಲ್ಲಿ ಕಳೆದುಹೋಗುತ್ತದೆ.

–ಹಿತೋಪದೇಶ

★ ಕುಲವನ್ನು ಹೇಳಿ ಪ್ರಯೋಜನವಿಲ್ಲ. ನಡತೆಯೇ ಮುಖ್ಯ. ಒಳ್ಳೇ ಫಲವತ್ತಾದ ನೆಲದಲ್ಲಿ ಮುಳ್ಳಿನ ಗಿಡಗಳು ಚೆನ್ನಾಗಿ ಬೆಳೆಯುವುದಿಲ್ಲವೆ?

–ಮೃಚ್ಛಕಟಿಕ

★ ಕರುಹಾಕದ ಅಥವಾ ಹಾಲು ಕೊಡದ ಹಸುವಿನಿಂದೇನು ತಾನೇ ಮಾಡುವುದು? ವಿದ್ವಾಂಸನೂ ಆಗಿರದೆ, ಭಕ್ತಿವಂತನೂ ಆಗಿರದೆ ಇರುವ ಪುತ್ರನು ಹುಟ್ಟಿದುದರಿಂದ ಏನು ತಾನೇ ಸಾರ್ಥಕ?

–ಪಂಚತಂತ್ರ

★ ಗೆಲುವಿಗೆ ಮೂಲಾಧಾರ ಸ್ಥಿರಚಿತ್ತ ಮತ್ತು ಏಕಾಗ್ರತೆ.

–ಅಜ್ಞಾತ

★ ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ, ಸತಿ ಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ ಕಾಣಾ! ರಾಮನಾಥ.

–ಜೇಡರ ದಾಸಿಮಯ್ಯ

★ ಅದೃಷ್ಟ ನಿಮ್ಮ ಮನೆಯ ಬಾಗಿಲನ್ನು ತಟ್ಟಬೇಕೆನ್ನುವಿರಾ? ಹಾಗಿದ್ದರೆ ಶ್ರದ್ಧೆಯಿಂದ ಕೆಲಸ ಮಾಡುವುದನ್ನು ಕಲಿಯಿರಿ.

–ಆಲಿವರ್ ಗೋಲ್ಡ್‌ಸ್ಮಿತ್

★ ಈ ಲೌಕಿಕ ಜೀವನವು ಕೇವಲ ಒಂದು ಆಟ, ವಿನೋದ. ತೋರಿಕೆಯ ವೈಭವ. ಪರಸ್ಪರರ ಮೇಲೆ ಹಿರಿಮೆ ಸಾಧಿಸುವ ಪ್ರಯತ್ನ. ಸಂಪತ್ತು ಹಾಗೂ ಸಂತಾನದ ವಿಷಯದಲ್ಲಿ ಪರಸ್ಪರರನ್ನು ಮೀರಿ ಹೋಗುವ ಪೈಪೋಟಿ ಮಾತ್ರವಲ್ಲದೆ ಇನ್ನೇನೂ ಅಲ್ಲ.

–ಕುರಾನ್

★ ಪುಸ್ತಕಗಳು ಇನ್ನೂ ಹುಟ್ಟದಿರುವ ಜನಾಂಗದ ಆಸ್ತಿ.

–ಜೋಸೆಫ್ ಅಡಿಸನ್

★ ತಪ್ಪನ್ನು ಎಲ್ಲರೂ ಮಾಡುತ್ತಾರೆ. ಕೆಲವರು ಅವುಗಳಿಂದ ಪಾಠ ಕಲಿಯುತ್ತಾರೆ. ಅವರು ಮತ್ತೆ ಅದೇ ತಪ್ಪು ಮಾಡುವುದಿಲ್ಲ. ತಪ್ಪಿಗೆ ನೆಪ ಹೇಳುವವರು ಮತ್ತೆ ಅದೇ ತಪ್ಪು ಮಾಡುತ್ತಿರುತ್ತಾರೆ.

–ಅಜ್ಞಾತ

★ ಹಣದ ಹಿಂದೆ ಬಿದ್ದವರಿಗೆ ಸಾಕು ಎನಿಸುವುದಿಲ್ಲ. ದುಡ್ಡು ತೃಪ್ತಿ ನೀಡುವುದಿಲ್ಲ. ಬದಲಾಗಿ ಮತ್ತಷ್ಟು ಹಸಿವು ಹೆಚ್ಚಿಸುತ್ತದೆ.

–ಫ್ರಾನ್ಸಿಸ್ ಬೇಕನ್

★ ಕೆಲವರು ಒಳ್ಳೆಯವರ ಹೆಸರಿನಲ್ಲಿ ಕೆಟ್ಟ ಕೆಲಸ ಮಾಡಿ ಅವರಿಗೆ ಕೆಟ್ಟ ಹೆಸರು ತರುತ್ತಾರೆ. ಅಂಥವರ ಬಗ್ಗೆ ಜಾಗರೂಕರಾಗಿರಿ.

–ಕೃಷ್ಣಮೂರ್ತಿ ಪುರಾಣಿಕ

★ ಒಳ್ಳೆಯತನವನ್ನು ಮೈಗೂಡಿಸಿಕೊಳ್ಳದಿದ್ದರೆ, ಒಳ್ಳೆಯವರನ್ನು ಒಲಿಸಿಕೊಳ್ಳುವುದು ಸುಲಭದ ಮಾತಲ್ಲ.

–ಸಾಫೋಕ್ಲಿಸ್

★ ತ್ಯಾಗದ ಆದರ್ಶ ಮಹಾನ್. ಅದು ಈ ಜಗತ್ತಿನಲ್ಲಿ ಎಲ್ಲವನ್ನೂ ಸಾಧಿಸಬಲ್ಲದು.

–ಮಹಾವೀರ